# ಜನ ಯೋಜನೆ

# JANA YOJANE

## ( PROCESS OFF PLANNING AT GRASSROOT LEVEL-KARNATAKA)

"ಹೋಗಿ..ನಿಮ್ಮ ಜನರನ್ನು ಭೇಟಿ ಮಾಡಿ, ಅವರ ಜೊತೆ ತಂಗಿರಿ, ಅವರ ಜೊತೆ ಬದುಕಿರಿ, ಅವರ ಜೊತೆ ಕೆಲಸ ಮಾಡಿ, ಅವರಲ್ಲೇನಿದೆಯೋ ಅಲ್ಲಿಂದ ಆರಂಭಿಸಿ, ಅವರಿಗೆ ಗೊತ್ತಿರುವುದರಿಂದ ಆರಂಭಿಸಿ ಮತ್ತು ಅಭಿವೃದ್ಧಿ ಪಡಿಸಿ, ಕೊನೆಗೆ, ಕೆಲಸದ ಮುಕ್ತಾಯವಾಗುವಾಗ ಅವರು ಹೇಳುತ್ತಾರೆ: "ನಾವೇ ಇದನ್ನು ಮಾಡಿದೆವು"

ಲಾ ವೋತ್ಸೆ

**ಲೇಖನ:**
ವಿಲ್‌ಫ್ರೆಡ್ ಡಿ ಸೋಜ
ಸಲಹೆಗಾರರು, ತರಬೇತಿ ಮತ್ತು ಸಾಮಗ್ರಿ ಅಭಿವೃದ್ಧಿ
ಅನಸಾರಾಗ್ರಾ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು

**ಅನಸಾರಾಗ್ರಾಸಂಸ್ಥೆಯ ಪ್ರಯತ್ನ**

ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ 2002ರಲ್ಲಿ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಉಪಗ್ರಹ ಆಧರಿತ ತರಬೇತಿಯನ್ನು ವಿನ್ಯಾಸಗೊಳಿಸುವ ಸಂದರ್ಭದಲ್ಲಿ ಕೇರಳ ರಾಜ್ಯದ ಜನಯೋಜನೆಯ ಪ್ರಕ್ರಿಯೆಯ ಅನುಭವವನ್ನು ಕೂಡ ಪಠ್ಯ ವಿಷಯವಾಗಿ ಅಳವಡಿಸಿಕೊಂಡಿತು. ಇಂತಹ ಒಂದು ಪ್ರಯತ್ನ ನಮ್ಮ ನೆರೆಯ ರಾಜ್ಯದಲ್ಲಿ ಯಶಸ್ವಿಯಾಗಿ ನಡೆದಿದೆ. ನಮ್ಮ ರಾಜ್ಯದಲ್ಲೂ ಇದನ್ನು ಅಳವಡಿಸಿಕೊಂಡು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ ಎನ್ನುವ ಮಾನಸಿಕ ಬದಲಾವಣೆಯನ್ನು ಕರ್ನಾಟಕದ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಮೂಡಿಸುವುದು ಸಂಸ್ಥೆಯ ಉದ್ದೇಶವಾಗಿತ್ತು. ತರಬೇತಿಯಲ್ಲಿ ಚರ್ಚೆಯ ವಿಷಯವಾಗಿ ಕೈಗೆತ್ತಿಕೊಂಡ ಜನಯೋಜನೆಯನ್ನು ಕರ್ನಾಟಕದ ಸಾಮಾಜಿಕ ಮತ್ತು ಆಡಳಿತಾತ್ಮಕ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುವ ಸಂಸ್ಥೆಯ ಪ್ರಯತ್ನ ಮುಂದುವರಿಯಿತು.

ಆನಂತರದ ದಿನಗಳಲ್ಲಿ ಸಂಸ್ಥೆಯ ಸಲಹೆಗಾರರು, ಬೋಧಕರು ಮತ್ತು ಸಂಪನ್ಮೂಲ ವ್ಯಕ್ತಿಗಳ ತಂಡ ವಿವಿಧ ಸಂದರ್ಭಗಳಲ್ಲಿ ಕೇರಳ ರಾಜ್ಯದ ಪಂಚಾಯಿತಿಗಳಿಗೆ ಭೇಟಿ ನೀಡಿ ತಳಹಂತದ ಯೋಜನಾ ಪ್ರಕ್ರಿಯೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯುವ ಪ್ರಯತ್ನವನ್ನು ಮಾಡಲಾಯಿತು.ಈ ಕಲಿಕೆಯ ಆಧಾರದಲ್ಲಿ ಮುಂದಿನ ತರಬೇತಿ ವಿನ್ಯಾಸಗಳಲ್ಲಿ ಕೇರಳ ಮಾದರಿಯನ್ನು ಆಧರಿಸಿದ, ಆದರೆ ಕರ್ನಾಟಕದ ಪರಿಸ್ಥಿತಿಗೆ ಹೊಂದಿಕೆಯಾಗುವ ಜನಯೋಜನೆಯ ಮಾದರಿಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಸಂಸ್ಥೆ ಗಂಭೀರವಾಗಿ ತೆಗೆದುಕೊಂಡಿತು.

ಈ ಪ್ರಯತ್ನಕ್ಕೆ ಪೂರಕವಾಗಿ ಗ್ರಾಮ ಪಂಚಾಯಿತಿ ಸದಸ್ಯರುಗಳ ತರಬೇತಿಯನ್ನು ನಡೆಸುತ್ತಿದ್ದ ಕೆಲವು ಆಯ್ದ ಸಂಪನ್ಮೂಲ ವ್ಯಕ್ತಿಗಳಿಗೆ ತಳಹಂತದ ಯೋಜನಾ ಪ್ರಕ್ರಿಯೆಗಳ ಕುರಿತು ವಿಶೇಷವಾಗಿ ತರಬೇತಿ ನೀಡಲಾಯಿತು.ಅವರ ಮೂಲಕ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಹಾಗೂ ರಾಯಚೂರು ಜಿಲ್ಲೆಯ ಮಾನ್ವಿ ಮತ್ತು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕುಗಳಿಗೆ ಸೇರಿದ ಒಟ್ಟು 17 ಗ್ರಾಮ ಪಂಚಾಯಿತಿಗಳಲ್ಲಿ ಜನರ ಸಹಭಾಗಿತ್ವದಲ್ಲಿ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವ ಪ್ರಯತ್ನವನ್ನು ಪ್ರಾಯೋಗಿಕವಾಗಿ ಮಾಡಲಾಯಿತು. ಪ್ರತಿ ಹಂತದಲ್ಲೂ ಎದುರಿಸಿದ ತೊಡಕುಗಳು ಮತ್ತು ಸಿಕ್ಕಿದ ಬೆಂಬಲವನ್ನು ಪರಿಗಣಿಸಿ ಅಗತ್ಯ ಬದಲಾವಣೆಗಳನ್ನು ಮಾಡುತ್ತಾ ಕರ್ನಾಟಕದ ಸಾಮಾಜಿಕ,ಬೌದ್ಧಿಕ ಮತ್ತು ಆಡಳಿತಾತ್ಮಕ ಪರಿಸರಕ್ಕೆ ಹೊಂದಿಕೆಯಾಗುತ್ತದೆ ಎಂದು ವಿಶ್ವಾಸ ಪಡಬಹುದಾದ ಒಂದು ಮಾದರಿಯನ್ನು ಅನಸಾರಾಗ್ರಾಸಂಸ್ಥೆ ಸಿದ್ಧಪಡಿಸಿದೆ. ಈ ಮಾದರಿ ಪರಿಪೂರ್ಣವಲ್ಲ. ಸುಧಾರಣೆಗೆ ಇನ್ನಷ್ಟು ಅವಕಾಶಗಳಿವೆ. ಆದರೂ ಪ್ರಸಕ್ತ ನಮ್ಮ ರಾಜ್ಯದ ಬಹುತೇಕ ಗ್ರಾಮ ಪಂಚಾಯಿತಿಗಳು ಅಲ್ಪ ಪ್ರಮಾಣದ ಬಾಹ್ಯ ಬೆಂಬಲ ಪಡೆದು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲವನ್ನು ಬಳಸಿ ತಳಹಂತದ ಯೋಜನೆಯನ್ನು ಸಿದ್ಧಪಡಿಸಲು ಸಾಧ್ಯ ಎನ್ನುವುದನ್ನು ಮನವರಿಕೆ ಮಾಡುವಲ್ಲಿ ಯಶಸ್ವಿಯಾಗಿದೆ.

ಈ ಅನುಭವ ಸಂಸ್ಥೆಯ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಇಂತಹ ಪ್ರಯತ್ನವನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಂಡು ಈ ಪ್ರಕ್ರಿಯೆಗೆ ಸಾಂಸ್ಥಿಕ ರೂಪ ಕೊಡುವ ನಿಟ್ಟಿನಲ್ಲಿ ಹೆಜ್ಜೆ ಇಡಲು ಪ್ರೇರಣೆಯನ್ನು ನೀಡಿದೆ.ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಆಯ್ಕೆಯಾಗಿರುವ ರಾಜ್ಯದ ಐದು ಜಿಲ್ಲೆಗಳಲ್ಲಿನ 324 ಗ್ರಾಮಪಂಚಾಯಿತಿಗಳಲ್ಲಿ ತಳ ಹಂತದ ಯೋಜನಾ ಪ್ರಕ್ರಿಯೆಯ ಮೂಲಕ ಪಂಚವಾರ್ಷಿಕ ಅಭಿವೃದ್ಧಿ ಮುನ್ನೋಟವನ್ನು ತಯಾರಿಸುವ ಬೃಹತ್ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಇತ್ತೀಚೆಗೆ ಅನುಷ್ಠಾನಕ್ಕೆ ತಂದಿರುವ ಕೆಲವು ಕಾರ್ಯಕ್ರಮಗಳು ಈ ರೀತಿಯ ಪ್ರಯತ್ನಗಳಿಗೆ ಪೂರಕವಾಗಿವೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳನ್ನು ತಳಹಂತದದಲ್ಲಿ ಜನಸಹಭಾಗಿತ್ವದ ಮೂಲಕವೇ ಸಿದ್ಧಪಡಿಸಬೇಕಾಗಿರುವುದು ಅನಿವಾರ್ಯವಾಗಿದೆ. ವಿಶ್ವ ಬ್ಯಾಂಕ್ ನೆರವಿನಿಂದ ಕರ್ನಾಟಕದ ಅತ್ಯಂತ ಹಿಂದುಳಿದ 39 ತಾಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಗ್ರಾಮ ಸ್ವರಾಜ್ ಯೋಜನೆಯಲ್ಲೂ ಜನಯೋಜನೆ ಸಿದ್ಧಪಡಿಸುವುದನ್ನು ಅನಿವಾರ್ಯಗೊಳಿಸಲಾಗಿದೆ. ರಾಜ್ಯದ 5 ಜಿಲ್ಲೆಗಳಲ್ಲಿ ಕೇಂದ್ರ ಸರಕಾರದ ನೆರವಿನ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಕಾರ್ಯಕ್ರಮಗಳಿಗೂ ಈ ಪ್ರಕ್ರಿಯೆಯನ್ನು ಕಡ್ಡಾಯಗೊಳಿಸಲಾಗಿದೆ.ಈ ಎಲ್ಲಾ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳು ಒಂದಿಲ್ಲೊಂದು ಹಂತದಲ್ಲಿ ಜನಯೋಜನೆಯನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಬಹಳ ಪ್ರಮುಖವಾಗಿ ಹಿಂದುಳಿದ ಪ್ರದೇಶಗಳ ಅನುದಾನ ನಿಧಿಯ ಬಳಕೆಗೆ ಸಂಬಂಧಪಟ್ಟಂತೆ ಕೇಂದ್ರ ಯೋಜನಾ ಆಯೋಗ ಹೊರಡಿಸಿರುವ ಯೋಜನಾ ಪ್ರಕ್ರಿಯೆಯ ಮಾರ್ಗದರ್ಶಿ ಸೂತ್ರಗಳನ್ನೇ ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಸೂಚನೆ

ಸ್ಥಳೀಯ ಮಾನವ ಸಂಪನ್ಮೂಲವನ್ನೇ ಬಳಸಿ ಈ ಕಾರ್ಯವನ್ನು ನಡೆಸುವ ಆತ್ಮ ವಿಶ್ವಾಸವನ್ನು ಹೊಂದಲು ಸಾಧ್ಯವಾಗುತ್ತದೆ.

ಜನಯೋಜನೆ ಪ್ರಕ್ರಿಯೆಗೆ ಸಮುದಾಯದ ಬೆಂಬಲವನ್ನು ಕ್ರೋಢೀಕರಿಸುವ ಜೊತೆಗೆ ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವಾಗುವಂತೆ ಅದರ ಹಂತಗಳು ಮತ್ತು ಚಟುವಟಿಕೆಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ. ಈ ಚಟುವಟಿಕೆಗಳು ಸಂಸ್ಥೆಯು ಈತನಕ ಸುಮಾರು 350 ಗ್ರಾಮ ಪಂಚಾಯಿತಿಗಳಲ್ಲಿ ಜನಯೋಜನೆ ಸಿದ್ದಪಡಿಸುವ ಚಟುವಟಿಕೆಗಳ ಮೂಲಕ ಪಡೆದ ಅನುಭವದಿಂದ ಮೂಡಿ ಬಂದವುಗಳಾಗಿವೆ.

**ಹಂತ 1. ಪೂರ್ವ ತಯಾರಿ**

ಗ್ರಾಮಪಂಚಾಯಿತಿಗಳಲ್ಲಿ ಪೂರ್ವ ನಿರ್ಧರಿತ ಅವಧಿಯಲ್ಲಿ ಜನಯೋಜನೆಯನ್ನು ಸಿದ್ಧಪಡಿಸುವ ಕಾರ್ಯ ನಡೆಯಬೇಕಾಗುತ್ತದೆ. ಈ ಕಾರ್ಯವನ್ನು ಆರಂಭಿಸುವುದಕ್ಕೆ ಮೊದಲು ಸಾಕಷ್ಟು ಪೂರ್ವ ತಯಾರಿಗಳನ್ನು ಮಾಡಿ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು ಅವಶ್ಯಕ. ಪೂರ್ವ ತಯಾರಿ ಹಂತದಲ್ಲಿ ಮಾಡ ಬೇಕಾದ ಚಟುವಟಿಕೆಗಳ ವಿವರ ಹೀಗಿದೆ.

**ಅ. ಪೂರ್ವಭಾವಿ ಮಾಹಿತಿ ನೀಡಿಕೆ**

ಜನ ಯೋಜನೆ ಸಿದ್ಧಪಡಿಸಬೇಕಾಗಿರುವ ಗ್ರಾಮ ಪಂಚಾಯಿತಿಗಳಿಗೆ ಒಟ್ಟಾರೆಯಾಗಿ ಕಾರ್ಯಕ್ರಮದ ಕುರಿತು ಸಂಪೂರ್ಣವಾಗಿ ಮಾಹಿತಿ ನೀಡಿ, ಅವರ ಕ್ರಿಯಾತ್ಮಕ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಬೇಕು. ಜನಯೋಜನೆ ಪ್ರಕ್ರಿಯೆಯನ್ನು ಆರಂಭಿಸುವ ಕನಿಷ್ಟ ಒಂದು ವಾರದ ಮೊದಲು ಗ್ರಾಮ ಪಂಚಾಯಿತಿಗೆ ಜನ ಯೋಜನೆ ಪ್ರಕ್ರಿಯೆಯ ವೇಳಾಪಟ್ಟಿಯನ್ನು ನೀಡಬೇಕು. ಅಲ್ಲದೆ ಈ ಕೆಳಗಿನ ಅಂಶಗಳ ಕುರಿತು ಅವರಿಗೆ ಸ್ಪಷ್ಟವಾದ ಮಾಹಿತಿಯನ್ನು ಒದಗಿಸಬೇಕು.ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ಮಾತ್ರವಲ್ಲದೆ ಸಮುದಾಯ ಸಂಘಟನೆಗಳು ಹಾಗು ಗ್ರಾಮಸ್ಥರು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಈ ಮುಂದಿನ ಅಂಶಗಳ ಕುರಿತು ಸ್ಪಷ್ಟತೆಯನ್ನು ನೀಡಬೇಕು.

1. ಜನಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯಿತಿ ಜವಾಬ್ದಾರಿ
2. ಕಾರ್ಯತಂಡಗಳ ರಚನೆ, ವಾರ್ಡ್ ಹಾಗೂ ಗ್ರಾಮ ಸಭೆಗಳ ಸಂಘಟನೆ ಕುರಿತು ನಿರ್ದಿಷ್ಟ ಜವಾಬ್ದಾರಿ
3. ಜನಯೋಜನೆಗೆ ಅಗತ್ಯವಿರುವ ಸಾಮಾನ್ಯ ಮಾಹಿತಿಗಳನ್ನು ಮುಂಚಿತವಾಗಿ ಕೋಷ್ಟಕಗಳಲ್ಲಿ ಸಂಗ್ರಹಿಸುವುದು

**ಆ. ಬೆಂಬಲ ಕ್ರೋಢೀಕರಣ**

ಜನಯೋಜನೆ ಪ್ರಕ್ರಿಯೆ ಕೇವಲ ಗ್ರಾಮ ಪಂಚಾಯಿತಿಯೊಂದು ಸ್ವತಂತ್ರ್ಯವಾಗಿ ನಡೆಸಬಹುದಾದ ಸಾಮಾನ್ಯ ಚಟುವಟಿಕೆಯಲ್ಲ. ಈ ಪ್ರಕ್ರಿಯೆ ಯಶಸ್ವಿಯಾಗಬೇಕಾದರೆ ಪಂಚಾಯಿತಿರಾಜ್ ವ್ಯಾಪ್ತಿಗೆ ಬರುವ ಎಲ್ಲಾ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳು ಮತ್ತು ಕ್ಷೇತ್ರ ಸಿಬ್ಬಂದಿಗಳ ಸಹಕಾರ ಮತ್ತು ಭಾಗವಹಿಸುವಿಕೆ ಅತ್ಯವಶ್ಯ. ಇದನ್ನು ಖಾತರಿಪಡಿಸಲು ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸಬೇಕಾಗಿರುರುತ್ತದೆ. ತಾಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು ತಮ್ಮ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಜನ ಯೋಜನೆ ಸಿದ್ಧಪಡಿಸುವ ನಿಟ್ಟಿನಲ್ಲಿ ಈ ಕೆಳಗಿನ ಅಂಶಗಳಿಗೆ ಗಮನ ನೀಡಬೇಕಾಗಿದೆ.

1. ಪ್ರಕ್ರಿಯೆಗೆ ಅಗತ್ಯವಿರುವ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವುದು
2. ಪ್ರಕ್ರಿಯೆಗೆ ಅಗತ್ಯವಿರುವ ಸಾಂಸ್ಥಿಕ ಬೆಂಬಲ ಕ್ರೋಢೀಕರಿಸುವುದು
3. ಅಭಿವೃದ್ಧಿ ಇಲಾಖೆಗಳ ಕ್ಷೇತ್ರ ಸಿಬ್ಬಂದಿಗಳ ಭಾಗವಹಿಸುವುವಿಕೆಯನ್ನು ಖಾತರಿಪಡಿಸುವುದು
4. ಪಂಚಾಯಿತಿ ಚುನಾಯಿತ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ಬಾಗವಹಿಸುವಿಕೆಯನ್ನು ಖಾತರಿಪಡಿಸುವುದು
5. ಸಿದ್ದಪಡಿಸಿದ ಜನಯೋಜನೆಯನ್ನು ಮೇಲಿನ ಹಂತಗಳಲ್ಲಿ ಬದಲಾವಣೆ ಮಾಡದೆ ಕಾರ್ಯಗತಗೊಳಿಸುವುದು

**ಇ.ತರಬೇತಿ**

ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಮುನ್ನೋಟ ಅಥವಾ ಜನಯೋಜನೆಯನ್ನು ಜನರ ಸಹಭಾಗಿತ್ವದಲ್ಲಿ ಸಿದ್ದಪಡಿಸುವ ಪ್ರಕ್ರಿಯೆ ಹೆಚ್ಚಿನ ಕೌಶಲ್ಯ ಮತ್ತು ಬದ್ಧತೆಯನ್ನು ನಿರೀಕ್ಷಿಸುತ್ತದೆ. ಮೂರು ಜನರಿರುವ ಕಾರ್ಯಕರ್ತರ ತಂಡ 9 ದಿನಗಳ ಅವಧಿಯಲ್ಲಿ ನಿರ್ದಿಷ್ಟಪಡಿಸಿದ ಗ್ರಾಮಪಂಚಾಯಿತಿಗಳಲ್ಲಿ ವಾಸ್ತವ್ಯವಿದ್ದು, ವಿವಿಧ ಹಂತದ ಚಟುವಟಿಕೆಗಳನ್ನು ನಡೆಸಬೇಕಾಗುತ್ತದೆ. ಜನರ ಸಹಭಾಗಿತ್ವದೊಂದಿಗೆ ಜನ ಯೋಜನೆ ಸಿದ್ಧಪಡಿಸುವ ಜೊತೆಗೆ ಅದನ್ನು ಕಾರ್ಯಗತಗೊಳಿಸಲು ಸಾಧ್ಯವಾಗುವಂತಹ ವಾತಾವರಣವನ್ನು ಗ್ರಾಮಪಂಚಾಯಿತಿಯಲ್ಲಿ ಸೃಷ್ಟಿಸುವುದು ಕೂಡಾ ಕಾರ್ಯಕರ್ತರ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ

ವಲಯವಾರು ಕಾರ್ಯತಂಡಗಳಲ್ಲಿ ಸದಸ್ಯರಾಗಿ ಸೇರ್ಪಡೆ ಮಾಡಬಹುದಾದವರ ಪಟ್ಟಿಯನ್ನು ಇಲ್ಲಿ ನೀಡಲಾಗಿದೆ.

**1. ಉತ್ಪಾದನಾ ವಲಯದ ಕಾರ್ಯತಂಡ**

ಉತ್ಪಾದನಾ ವಲಯವು ಆ ಗ್ರಾಮ ಪಂಚಾಯಿತಿಗೆ ಸೇರಿದ ಜನರು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿತವಾಗಿರುವ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಿರುತ್ತದೆ. ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಅರಣ್ಯ ಸಂಬಂಧೀ ಚಟುವಟಿಕೆಗಳು, ಕಸುಬುಗಳು, ಗುಡಿ ಕೈಗಾರಿಕೆ, ರೇಷ್ಮೆ, ಮೀನುಗಾರಿಕೆ, ಸ್ವ ಉದ್ಯೋಗ ಇತ್ಯಾದಿ ಎಲ್ಲ ಕ್ಷೇತ್ರಗಳು ಉತ್ಪಾದನಾ ವಲಯದ ವ್ಯಾಪ್ತಿಗೆ ಬರುತ್ತವೆ. ಗ್ರಾಪಂ ಪಂಚಾಯಿತಿಗಳಲ್ಲಿ ಕಾಯಿದೆ ಬದ್ಧವಾಗಿ ರಚಿತವಾಗಬೇಕಿರುವ ಉತ್ಪಾದನಾ ಸ್ಥಾಯೀ ಸಮಿತಿಯಲ್ಲಿ ಗ್ರಾಮ ಪಂಚಾಯಿತಿಯ ಐವರು ಚುನಾಯಿತ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಇವರ ಜೊತೆಗೆ ಮೇಲೆ ಹೇಳಲಾಗಿರುವ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಅರಣ್ಯ, ರೇಷ್ಮೆ, ಮೀನುಗಾರಿಕೆ ಇತ್ಯಾದಿ ಇಲಾಖೆಗಳ ಕ್ಷೇತ್ರ ಸಿಬ್ಬಂದಿಗಳನ್ನು ಕಡ್ಡಾಯವಾಗಿ ಉತ್ಪಾದನಾ ವಲಯದ ಕಾರ್ಯತಂಡಕ್ಕೆ ಸದಸ್ಯರಾಗಿ ಸೇರಿಸಿಕೊಳ್ಳಬೇಕು. ಅಲ್ಲದೆ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ರಚಿತವಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘ, ರೈತರ ಸಹಕಾರಿ ಬ್ಯಾಂಕ್, ಸ್ವ ಸಹಾಯ ಗುಂಪುಗಳ ಪ್ರತಿನಿಧಿಗಳು, ಗುಡಿ ಕೈಗಾರಿಕೆಯನ್ನು ನಡೆಸುತ್ತಿರುವ ವ್ಯಕ್ತಿಗಳು, ಪ್ರಗತಿಪರ ರೈತರು ಮೊದಲಾದವರನ್ನು ಕಾರ್ಯತಂಡಕ್ಕೆ ಸದಸ್ಯರಾಗಿ ಸೇರಿಸಿಕೊಳ್ಳಬೇಕು.

**2. ಮೂಲಭೂತ ಸೌಕರ್ಯ ವಲಯದ ಕಾರ್ಯತಂಡ**

ಶೀರ್ಷಿಕೆಯೇ ಸ್ಪಷ್ಟಪಡಿಸುವಂತೆ ಜನರು ಉತ್ತಮ ಹಾಗೂ ಗೌರವಯುತ ಜೀವನವನ್ನು ಅನುಭವಿಸಲು ಒದಗಿಸಬೇಕಾದ ಎಲ್ಲಾ ಮೂಲ ಸೌಕರ್ಯಗಳು ಈ ವಲಯದ ವ್ಯಾಪ್ತಿಗೆ ಬರುತ್ತವೆ. ಮಾನವ ಅಭಿವೃದ್ಧಿಯಲ್ಲಿ ಪ್ರಮುಖವೆಂದು ಪರಿಗಣಿಸಲಾಗಿರುವ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಶುದ್ಧವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳೂ ಸೇರಿದಂತೆ, ರಸ್ತೆ, ಬೀದಿ ದೀಪ ಇತ್ಯಾದಿ ಸೇವೆಗಳು ಮತ್ತು ಇತರ ಪೂರಕ ಸೌಲಭ್ಯಗಳನ್ನು ಜನರಿಗೆ ತಲುಪಿಸಬೇಕಾಗಿರುವ ಇಲಾಖೆಗಳು ಈ ವಲಯದ ಚೌಕಟ್ಟಿನೊಳಗೆ ಸೇರುತ್ತವೆ. ಹೀಗಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪ್ರಾಥಮಿಕ ಪೂರ್ವ, ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ಕ್ಷೇತ್ರದ ಪ್ರಮುಖ ಕ್ಷೇತ್ರ ಸಿಬ್ಬಂದಿಗಳು, ಆರೋಗ್ಯ ಸೇವೆಯನ್ನು ಒದಗಿಸುವ ಕ್ಷೇತ್ರ ಸಿಬ್ಬಂದಿಗಳು, ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಮತ್ತು ನೈರ್ಮಲ್ಯ ವ್ಯವಸ್ಥೆಯ ಮೇಲ್ವಿಚಾರಣೆಗಾಗಿ ರಚಿಸಲಾಗಿರುವ ಸಮಿತಿಗಳ ಪ್ರತಿನಿಧಿಗಳನ್ನು ಹಾಗೂ ಮುಲಭೂತ ಸೌಕರ್ಯ ಸ್ಥಾಯಿ ಸಮಿತಿಯ ಸದಸ್ಯರಾಗಿರುವ ಗ್ರಾ.ಪಂಸದಸ್ಯರನ್ನೊಳಗೊಂಡಂತೆ ಮೂಲಭೂತ ಸೌಕರ್ಯ ವಲಯದ ಕಾರ್ಯತಂಡವನ್ನು ರಚಿಸಬೇಕು.

**3. ಸಾಮಾಜಿಕ ನ್ಯಾಯ ವಲಯದ ಕಾರ್ಯತಂಡ**

ಗ್ರಾಮ ಸರಕಾರದ ನೆಲೆಯಲ್ಲಿ ಸಾಮಾಜಿಕ ನ್ಯಾಯವನ್ನು ಸಾಧಿಸುವುದು ಮತ್ತು ಅದಕ್ಕೆ ಪೂರಕವಾಗಿರುವ ಸೌಲಭ್ಯಗಳು, ಕಾರ್ಯಕ್ರಮಗಳನ್ನು ರೂಪಿಸಿ ಅರ್ಹರಿಗೆ ಸಿಗುವಂತೆ ನೋಡಿಕೊಳ್ಳುವುದರ ಜೊತೆಗೆ ಜಾಗೃತಿಯನ್ನು ಮೂಡಿಸುವುದು ಈ ಕಾರ್ಯತಂಡದ ಪ್ರಮುಖ ಹೊಣೆಗಾರಿಕೆಯಾಗುತ್ತದೆ. ಮುಖ್ಯವಾಗಿ ಪರಿಶಿಷ್ಟರ ಕಲ್ಯಾಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು, ಎಲ್ಲಾ ರೀತಿಯ ಬಡತನ ನಿವಾರಣಾ ಕಾರ್ಯಕ್ರಮಗಳು, ವಸತಿ ಕಾರ್ಯಕ್ರಮಗಳು, ಪಡಿತರ ವಿತರಣೆ, ದುರ್ಬಲರಿಗೆ ಸಿಗಬೇಕಾದ ಮಾಶಾಸನಗಳು, ಬಾಲಕಾರ್ಮಿಕತೆ, ಜೀತಪದ್ಧತಿ, ದೇವದಾಸಿ ಪದ್ಧತಿ, ಅಸ್ಪೃಶ್ಯತೆಯಂತಹ ಸಾಮಾಜಿಕ ಕಳಂಕಗಳು ನಿವಾರಣೆಗೆ ಸಾಮಾಜಿಕ ನ್ಯಾಯ ವಲಯದ ಕಾರ್ಯತಂಡ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಕಾರ್ಯತಂಡದಲ್ಲಿಮುಖ್ಯವಾಗಿ ಪರಿಶಿಷ್ಟರ ಕಲ್ಯಾಣಕಾಗಿ ನಿಯೋಜಿತರಾಗಿರುವ ಇಲಾಖೆಗಳ ಕ್ಷೇತ್ರ ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳೆಯರು ಮತ್ತು ಮಕ್ಕಳ ಸಾಗಾಣಿಕೆ ತಡೆಯಲು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರಚಿತವಾಗಿರುವ ಜಾಗೃತ ಸಮಿತಿಯ ಪ್ರತಿನಿಧಿಗಳು, ದಲಿತ ಸಂಘಟನೆಗಳ ಪ್ರತಿನಿಧಿಗಳು, ಮಹಿಳಾ ಸ್ವ ಸಹಾಯ ಸಂಘಗಳ ಒಕ್ಕೂಟದ ಪ್ರತಿನಿಧಿಗಳು ಸದಸ್ಯರಾಗುವಂತೆ ನೋಡಿಕೊಳ್ಳಬೇಕು. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸದಸ್ಯರೂ ಕಾರ್ಯತಂಡದ ಸದಸ್ಯರಾಗುತ್ತಾರೆ.

ಮೇಲಿನ ಮೂರು ಕಾರ್ಯತಂಡಗಳ ರಚನೆಯ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಎಲ್ಲಾ ವಾರ್ಡ್‌ಗಳಿಗೆ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಳ್ಳಬೇಕು. ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯದ ಮೂಲಕ ಕಾರ್ಯತಂಡಗಳನ್ನು ರಚಿಸಿ ಅದಕ್ಕೆ ಮಾನ್ಯತೆ ಕಲ್ಪಿಸಬೇಕು. ಕಾರ್ಯತಂಡಗಳ ಅಧ್ಯಕ್ಷತೆಯನ್ನು ಸ್ಥಾಯಿ ಸಮಿತಿಗಳ ಅಧ್ಯಕ್ಷರಿಗೇ ವಹಿಸಬಹುದು. ಸಾಮಾನ್ಯ ಸಭೆ ತೀರ್ಮಾನಿಸಿದಲ್ಲಿ ಬೇರೆಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೆ ತಪ್ಪಿಲ್ಲ.

**4. ಅಭಿವೃದ್ಧಿ ಸಮನ್ವಯ (ಸಾಮಾಜಿಕ ತಪಾಸಣಾ) ಕಾರ್ಯತಂಡ**

ಜನರಿಗೆ ಲಭ್ಯವಾಗಬೇಕಾದ ಮೂಲಭೂತ ಸೇವೆಗಳು, ಸೌಲಭ್ಯಗಳು ಹಾಗೂ ಒಟ್ಟಾರೆಯಾಗಿ ಗ್ರಾಮೀಣಾಭಿವೃದ್ಧಿಗಾಗಿ ಇರುವ ಯೋಜನೆಗಳ ಅನುಷ್ಠಾನ ಪರಿಣಾಮಕಾರಿಯಾಗಿ ಆಗುವುದನ್ನು ಖಾತರಿಪಡಿಸಿಕೊಳ್ಳಲು ಮತ್ತು ಕುಂದು ಕೊರತೆಗಳನ್ನು

ಜನರ ಪಾಲ್ಗೊಳ್ಳುವಿಕೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಮುಂದೆ ನಡೆಯುವ ಗುಂಪುಸಭೆ, ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳಲ್ಲಿ ಜನ ಪ್ರತಿನಿಧಿಗಳು, ಕ್ಷೇತ್ರ ಸಿಬ್ಬಂದಿ ಮತ್ತು ಜನರಿಂದ ಬರುವ ಅಭಿಪ್ರಾಯಗಳು ಎಷ್ಟು ವಾಸ್ತವವಾಗಿವೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ. ಜೊತೆಗೆ ಕಾರ್ಯತಂಡಗಳ ಸದಸ್ಯರು ಒಂದು ನಿರ್ದಿಷ್ಟ ಉದ್ದೇಶವನ್ನು ಇಟ್ಟುಕೊಂಡು ಊರಿನಲ್ಲಿ ಸುತ್ತಾಡಿ ಗಮನಿಸುವ ಮೂಲಕ ಪೂರ್ವಾಗ್ರಹ ಪೀಡಿತ ಅಭಿಪ್ರಾಯಗಳಿಂದ ಹೊರಬಂದು ನಿಜವಾದ ಅಭಿವೃದ್ಧಿಯ ದೃಷ್ಟಿಕೋನವನ್ನು ಹೊಂದಲು ಸಹಾಯವಾಗುತ್ತದೆ.

**ವೈಯುಕ್ತಿಕ ಸಂದರ್ಶನಗಳು**

ಗ್ರಾಮ ವಿಹಾರದ ಸಂದರ್ಭದಲ್ಲಿ ಗ್ರಾಮಸ್ಥರನ್ನು ವೈಯುಕ್ತಿಕವಾಗಿ ಬೇಟಿ ಮಾಡಿ ಮಾತಾಡಿಸುವ ಮೂಲಕ ಅವರ ಸಮಸ್ಯೆಗಳನ್ನು ಮತ್ತು ಬೇಡಿಕೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಮಾನವ ಅಭಿವೃದ್ಧಿಯೆಂದರೆ ಕೇವಲ ಕಣ್ಣಿಗೆ ಕಾಣುವ ಕಟ್ಟಡಗಳು ಮಾತ್ರವಲ್ಲ. ಶಿಕ್ಷಣ, ಅರೋಗ್ಯ, ಪರಿಸರ, ಶುದ್ಧವಾದ ಕುಡಿಯುವ ನೀರು ಸಿಗುವಂತಹ ವಾತಾವರಣವನ್ನು ಹೊಂದಲು ಪ್ರತಿಯೊಬ್ಬ ಪ್ರಜೆಗೂ ಹಕ್ಕಿದೆ. ಜೊತೆಗೆ ಹೊಣೆಗಾರಿಕೆಗಳೂ ಕೂಡಾ ಇವೆ ಎಂಬ ವಿಷಯಗಳನ್ನು ಚರ್ಚಿಸಲು ಸಾಧ್ಯವಿದೆ. ಜನ ಯೋಜನೆಯ ಪ್ರಕ್ರಿಯೆಗೆ ಜನರ ಬೆಂಬಲವನ್ನು ಕ್ರೋಢೀಕರಿಸುವುದಕ್ಕೂ ಈ ಚಟುವಟಿಕೆಟನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

**ಸಣ್ಣ ಗುಂಪು ಸಭೆಗಳು**

ಅಡ್ಡನಡಿಗೆಯ ಮೂಲಕ ನಡೆಸಲಾದ ಗ್ರಾಮಸಮೀಕ್ಷೆಯಲ್ಲಿ ಕಂಡುಕೊಂಡ ಅಂಶಗಳನ್ನು ಪರಾಮರ್ಶಿಸುವುದು,ಜನರನ್ನು ವೈಯುಕ್ತಿಕ ಬೇಡಿಕೆಗಳು ಮತ್ತು ಸೌಲಭ್ಯಗಳ ಗುಂಗಿನಿಂದ  ಹೊರತಂದು ಸಮುದಾಯದ ಅಭಿವೃದ್ಧಿ ಮತ್ತು ಸಾಂಘಿಕ ಪ್ರಯತ್ನದ ಕಡೆಗೆ ಅವರ ಮನೋಭಾವವನ್ನು ಬದಲಾಯಿಸಲು ಪ್ರಯತ್ನಿಸುವುದು, ನಿಜವಾದ ಅಭಿವೃದ್ಧಿ ಎಂದರೆ ಏನು ಎನ್ನುವುದನ್ನು ಸಣ್ಣ ಗುಂಪುಗಳಲ್ಲಿ ಮನವರಿಕೆ ಮಾಡುವುದು, ಬೇಡಿಕೆಗಳಿಗೆ ಆಧ್ಯತೆಗಳನ್ನು ಗುರುತಿಸುವ  ವಿಧಾನವನ್ನು ಪರಿಚಯಿಸುವುದು ಮತ್ತು ವಾರ್ಡ್‌ಸಭೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು ಸಣ್ಣ ಸಣ್ಣ ಗುಂಪು ಸಭೆಗಳನ್ನು ನಡೆಸುವುದರ ಹಿಂದಿನ ಉದ್ದೇಶವಾಗಿದೆ. ಒಂದು ವಾರ್ಡ್‌ನ ಗಾತ್ರ ಮತ್ತು ಕುಟುಂಬಗಳ ಸಂಖ್ಯೆಗೆ ಅನುಗುಣವಾಗಿ ಒಂದು ವಾರ್ಡ್‌ನಲ್ಲಿ ಕನಿಷ್ಟ 2 ರಿಂದ ಗರಿಷ್ಟ 5 ಗುಂಪು ಸಭೆಗಳನ್ನು ನಡೆಸಬಹುದು. ಸ್ತ್ರೀ ಶಕ್ತಿ ಗುಂಪುಗಳು, ಲಂಬಾಣಿ ತಾಂಡಗಳು ಇತ್ಯಾದಿ ಗುಂಪುಗಳಿಗೆ ಪ್ರತ್ಯೇಕವಾದ ಸಭೆಗಳನ್ನು ನಡೆಸಿ ಅವರ ಬೇಡಿಕೆಗಳಿಗೂ ವಾರ್ಡ್ ಸಭೆ, ಗ್ರಾಮಸಭೆಯಲ್ಲಿ ಮಾನ್ಯತೆ ಕಲ್ಪಿಸುವಂತೆ ಮಾಡಲು ಸಾಧ್ಯವಿದೆ.

ಕಾರ್ಯತಂಡಗಳು ಗ್ರಾಮ ಸಮೀಕ್ಷೆ ಮತ್ತು ಗುಂಪು ಸಭೆಗಳ ಸಂದರ್ಭದಲ್ಲಿ ಭೇಟಿ ನೀಡಿದ ಪ್ರದೇಶ ಅಥವಾ ವಾರ್ಡ್‌ಗಳ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮೂರೂ ವಲಯಗಳ ವ್ಯಾಪ್ತಿಗೆ ಬರುವ  ಊರಿನ ಅವಶ್ಯಕತೆಗಳು ಮತ್ತು ಜನರ ಬೇಡಿಕೆಗಳನ್ನು ಗುಂಪು ಸಭೆಗಳ ಸಂದರ್ಭದಲ್ಲಿ ವ್ಯವಸ್ಥಿತವಾಗಿ ಗುರುತಿಸಿ ದಾಖಲಿಸಿಕೊಳ್ಳಬೇಕು.

**ಹಂತ 3. ವಾರ್ಡ್ ಸಭೆಗಳ ಸಂಘಟನೆ**

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಾರ್ಡ್‌ಗಳ ಗಾತ್ರ (ಗ್ರಾಮ ಸರಕಾರದ ಚುನಾವಣಾ ಕ್ಷೇತ್ರಗಳು) ಜನಸಂಖ್ಯೆಗೆ ಅನುಗುಣವಾಗಿ ಬದಲಾಗುತ್ತದೆ. ಬೇರೆ ಬೇರೆ ಗ್ರಾಮ ಪಂಚಾಯಿತಿಗಳ ವಾರ್ಡ್‌ಗಳ ಸಂಖ್ಯೆಯಲ್ಲೂ ವ್ಯತ್ಯಾಸ ಉಂಟಾಗುತ್ತದೆ. ವಾರ್ಡ್‌ಗಳಿಂದ ಆಯ್ಕೆಯಾಗಲ್ಪಡುವ ಸದಸ್ಯರ ಸಂಖ್ಯೆಯಲ್ಲೂ ವ್ಯತ್ಯಾಸ ಇರುತ್ತದೆ. ಕೆಲವು ವಾರ್ಡ್‌ಗಳು ಒಬ್ಬ ಪ್ರತಿನಿಧಿಯನ್ನು ಮಾತ್ರ ಹೊಂದಿದ್ದರೆ, ಇನ್ನು ಕೆಲವು ವಾರ್ಡ್‌ಗಳಲ್ಲಿ 5ರವರೆಗೂ ಸದಸ್ಯರು ಇರುತ್ತಾರೆ. ಈ ವಾರ್ಡ್‌ಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಭಿವೃದ್ಧಿಯ ಘಟಕಗಳು. ಈ ಕಾರಣದಿಂದಾಗಿಯೇ ಜನ ಸಾಮಾನ್ಯರೂ ಅಭಿವೃದ್ಧಿಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗಬೇಕು ಎನ್ನುವ ಕಾರಣದಿಂದ ಕರ್ನಾಟಕದಲ್ಲಿ  ವಾರ್ಡ್‌ಸಭೆಗಳಿಗೆ ಕಾಯಿದೆ ಬದ್ಧವಾದ ಮಾನ್ಯತೆಯನ್ನು ಒದಗಿಸಲಾಗಿದೆ. ವರ್ಷಕ್ಕೆ ಎರಡು ಬಾರಿ ನಡೆಯುವ ಗ್ರಾಮಸಭೆಗಳಿಗೆ ಮುಂಚಿತವಾಗಿ ಆ ಗ್ರಾಮಪಂಚಾಯಿತಿಯಲ್ಲಿರುವ ಎಲ್ಲಾ ವಾರ್ಡ್‌ಗಳಲ್ಲಿ ಆ ವಾರ್ಡನ್ನು ಪ್ರತಿನಿಧಿಸುವ ಗ್ರಾಮಪಂಚಾಯಿತಿ ಸದಸ್ಯರ ಅಧ್ಯಕ್ಷತೆಯಲ್ಲಿ ವಾರ್ಡ್‌ಸಭೆಗಳನ್ನು ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ. ಆ ಮೂಲಕ ಸಣ್ಣ ಘಟಕದಲ್ಲಿ ಜನರು ಮುಕ್ತವಾಗಿ ತಮ್ಮ ಬೇಡಿಕೆಗಳು ಮತ್ತು ಅವಶ್ಯಕತೆಗಳ ಕುರಿತು ಚರ್ಚಿಸಿ ಅವುಗಳನ್ನು ಕಾರ್ಯಗತಗೊಳಿಸುವಂತೆ ಒತ್ತಡ ಹಾಕಲು ಸಾಧ್ಯವಾಗುವಂತಹ ಒಂದು ವೇದಿಕೆಯನ್ನು ಸೃಷ್ಟಿಸಲಾಗಿದೆ.

ಅವರ ಬದ್ಧತೆಯನ್ನು ತೋರ್ಪಡಿಸಲು ಅವಕಾಶ ಕಲ್ಪಿಸುವುದು ಅಗತ್ಯ.

ಗ್ರಾಮ ಸಭೆಯ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

1. ಗ್ರಾಮಸಭೆಗೆ ಮುಂಚಿತವಾಗಿ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಕಾರ್ಯತಂಡಗಳ ಸದಸ್ಯರು ಅನೌಪಚಾರಿಕವಾಗಿ ಸಭೆ ಸೇರಿ ಎಲ್ಲಾ ವಾರ್ಡ್‌ಗಳ ಬೇಡಿಕೆಗಳು ಮತ್ತು ಆಧ್ಯತೆಗಳ ಕುರಿತಂತೆ ಚರ್ಚಿಸಿ ಅವುಗಳನ್ನು ಗ್ರಾಮಸಭೆಯ ಮುಂದೆ ಮಂಡಿಸುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳಬೇಕು.
2. ಗ್ರಾಮ ಪಂಚಾಯಿತಿ ಅಧ್ಯಕ್ಷರೇ ಗ್ರಾಮಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಬೇಕು.
3. ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಸ್ವಾಗತಿಸಬೇಕು ಮತ್ತು ಸಭಾ ನಡವಳಿಗಳನ್ನು ದಾಖಲಿಸಿಕೊಳ್ಳಬೇಕು.
4. ವಾರ್ಡ್‌ವಾರು ಆಧ್ಯತಾ ಪಟ್ಟಿಯನ್ನು ಆಯಾ ವಾರ್ಡ್‌ನ ಸದಸ್ಯರೇ ಸಭೆಯ ಮುಂದೆ ಮಂಡಿಸಬೇಕು. ಅವರಿಗೆ ಸಾಧ್ಯವಾಗದೆ ಇದ್ದಾಗ ಕಾರ್ಯತಂಡಗಳ ಸದಸ್ಯರು ಈ ಕೆಲಸವನ್ನು ಮಾಡಬಹುದು. ಆದರೆ ಮಂಡಿಸುವವರು ಯಾರು ಎನ್ನುವುದು ಮುಂಚಿತವಾಗಿಯೇ ನಿರ್ಧಾರವಾಗಿರಬೇಕು.
5. ಪ್ರತಿಯೊಂದು ವಾರ್ಡ್‌ನ ವಲಯವಾರು ಬೇಡಿಕೆಗಳನ್ನು ಪ್ರತ್ಯೇಕವಾಗಿ ಮಂಡಿಸಿ ಗ್ರಾಮಸಭೆ ಸೂಚಿಸಿದ ತಿದ್ದುಪಡಿ ಮತ್ತು ಸೇರ್ಪಡೆಗಳನ್ನು ಚರ್ಚಿಸಿ ದಾಖಲಿಸಿಕೊಳ್ಳಬೇಕು. ಯಾವುದಾದರೂ ಬೇಡಿಕೆಗಳನ್ನು ಕೈ ಬಿಡುವ ಮತ್ತು ಆಧ್ಯತೆಗಳನ್ನು ಬದಲಾಯಿಸುವ ನಿರ್ಧಾರ ಬಹುಮತದ ಆಧಾರದಲ್ಲಿ ನಡೆಯಬೇಕು.
6. ಎಲ್ಲಾ ವಾರ್ಡ್‌ಗಳ ಮೂರೂ ವಲಯಗಳ ಅಭಿವೃದ್ಧಿ ಯೋಜನೆಯ ಮಂಡನೆ ಮತ್ತು ಚರ್ಚೆಯ ನಂತರ ಒಟ್ಟಾರೆಯಾಗಿ ಮುಂದಿನ ಒಂದು ವರ್ಷದಲ್ಲಿ ಗ್ರಾಮ ಪಂಚಾಯಿತಿ ಕೈಗೆತ್ತಿಕೊಳ್ಳಬೇಕಾದ ಕಾರ್ಯಕ್ರಮಗಳು ಮತ್ತು ಕಾರ್ಯಕ್ರಮಗಳ ಕುರಿತು ಚರ್ಚೆ ನಡೆದು ಆಧ್ಯತಾಪಟ್ಟಿಯನ್ನು ಸಿದ್ಧಪಡಿಸಬೇಕು. ಈ ಆಧ್ಯತಾ ಪಟ್ಟಿ ವಾರ್ಡ್‌ಗಳ ಆಧ್ಯತಾಪಟ್ಟಿಗೆ ವ್ಯತಿರಿಕ್ತವಾಗಿರದಂತೆ ಎಚ್ಚರಿಕೆ ವಹಿಸುವುದು.
7. ಗ್ರಾಮ ಸಭೆಯಲ್ಲಿ ಅಭಿವೃದ್ಧಿ ಮುನ್ನೋಟ ವರದಿಯ ಮೇಲೆ ಸಮಗ್ರವಾದ ಚರ್ಚೆ ನಡೆದು ಅಂತಿಮವಾಗಿ ಈ ವರದಿಯನ್ನು ಮುಂದಿನ ವರ್ಷಗಳಲ್ಲಿ ಗ್ರಾಮ ಪಂಚಾಯಿತಿಯ ಕ್ರಿಯಾ ಯೋಜನೆಯಲ್ಲಿ ಕಡ್ಡಾಯವಾಗಿ ಅಳವಡಿಸಿಕೊಂಡು ಅನುಷ್ಠಾನಗೊಳಿಸುವಂತೆ ನಿರ್ಣಯವನ್ನು ಕೈಗೊಳ್ಳಬೇಕು.
8. ಜನಯೋಜನೆಯನ್ನು ಸಿದ್ಧಪಡಿಸಲು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ರಚಿಸಲಾದ ಕಾರ್ಯತಂಡಗಳಿಗೆ ಅಭಿವೃದ್ಧಿ ಮುನ್ನೋಟದ ಅನುಷ್ಠಾನದ ಎಲ್ಲಾ ಹಂತಗಳಲ್ಲೂ ಮೇಲ್ವಿಚಾರಣೆ ನಡೆಸುವ ಅಧಿಕಾರವನ್ನು ಗ್ರಾಮಸಭೆಯ ನಿರ್ಣಯದ ಮೂಲಕ ಕೈಗೊಳ್ಳಬೇಕು. ಕಾರ್ಯತಂಡಗಳು ಕನಿಷ್ಟ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಪ್ರಗತಿಯನ್ನು ಅವಲೋಕಿಸಿ ಗ್ರಾಮ ಪಂಚಾಯಿತಿ ಮತ್ತು ಗ್ರಾಮಸಭೆಗೆ ಸಲಹೆ ಕೊಡುವ ಅಧಿಕಾರವನ್ನು ಗ್ರಾಮ ಸಭೆಯ ನಿರ್ಣಯ ಮೂಲಕ ನೀಡಬಹುದು.
9. ಗ್ರಾಮ ಸಭೆಯ ಎಲ್ಲಾ ತೀರ್ಮಾನಗಳನ್ನು ಅಲ್ಲೇ ದಾಖಲಿಸಿಕೊಂಡು ಸಭೆಗೆ ಓದಿ ಹೇಳಿ ರೆಕಾರ್ಡ್ ಮಾಡಿಕೊಳ್ಳುವಂತೆ ನೋಡಿಕೊಳ್ಳಬೇಕು.
10. ಗ್ರಾಮ ಸಭೆಯ ಚರ್ಚೆ ಮತ್ತು ತೀರ್ಮಾನಗಳು ದಾರಿ ತಪ್ಪದಂತೆ ನೋಡಿಕೊಂಡು, ಜನರಿಗೆ, ಜನಪ್ರತಿನಿಧಿಗೆ ಸರಕಾರಿ ಇಲಾಖೆಗಳ ಪ್ರತಿನಿಧಿಗಳಿಗೆ ಗ್ರಾಮಸಭೆಯ ಮೇಲೆ ನಂಬಿಕೆಯನ್ನು ಹೆಚ್ಚಿಸುವ ಕಾರ್ಯವನ್ನು ಅಭಿವೃದ್ಧಿ ಕಾರ್ಯಕರ್ತರು ನಿರ್ವಹಿಸಬೇಕು.

**ಹಂತ 6. ಅಭಿವೃದ್ಧಿ ಮುನ್ನೋಟ ವರದಿಯನ್ನು ಅಂತಿಮಗೊಳಿಸುವುದು**

ಅಭಿವೃದ್ಧಿ ಮುನ್ನೋಟ ವರದಿಯ 4 ಮತ್ತು 5ನೇ ಅಧ್ಯಾಯಗಳನ್ನು ಅಂತಿಮಗೊಳಿಸುವ ಕಾರ್ಯವನ್ನು ಗ್ರಾಮ ಸಭೆ ಮುಗಿದ ನಂತರವೇ ಮಾಡಬೇಕು. ಈ ಅಧ್ಯಾಯಗಳಲ್ಲಿ ಏನೆಲ್ಲಾ ಅಂಶಗಳು ಇರಬೇಕು ಎನ್ನುವ ಕುರಿತು ಮುಂದೆ ವಿವರಿಸಲಾಗಿದೆ.

**ಹಂತ 7. ಅಭಿವೃದ್ಧಿ ಮುನ್ನೋಟ ವರದಿಯನ್ನು ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸುವುದು**

ಒಂದು ಬಾರಿ ಅಭಿವೃದ್ಧಿ ಮುನ್ನೋಟ ವರದಿಯನ್ನು ಸಿದ್ಧಪಡಿಸಿದ ಮೇಲೆ ಅದನ್ನು ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾ ಯೋಜನಾ ಸಮಿತಿಗೆ ಸಲ್ಲಿಸುವುದು ಗ್ರಾಮ ಪಂಚಾಯಿತಿಯ ಜವಾಬ್ದಾರಿಯಾಗಿದೆ. ಗ್ರಾಮ ಸಭೆಯಲ್ಲಿ ಅಂತಿಮಗೊಂಡ ಅಭಿವೃದ್ಧಿ ಮುನ್ನೋಟವನ್ನು ನಂತರದಲ್ಲಿ ಒಂದು ತಿಂಗಳ ಅವಧಿಗೆ ಮುಂಚಿತವಾಗಿ ಗ್ರಾಮಪಂಚಾಯಿತಿ ಸಾಮಾನ್ಯ ಸಬೆಯಲ್ಲಿಟ್ಟು ಅನುಮೋಧನೆ ಪಡೆಯಬೇಕು ಮತ್ತು ಅದನ್ನು ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಯೋಜನಾ ಸಮಿತಿಗೆ ಒಪ್ಪಿಸಬೇಕು.

## ಅಭಿವೃದ್ಧಿ ಮುನ್ನೋಟ ವರದಿಯ ದಾಖಲೀಕರಣ

ಅಭಿವೃದ್ಧಿ ಮುನ್ನೋಟ ಅಂದರೆ ಸ್ಥಳೀಯ ಸರಕಾರವಾಗಿರುವ ಗ್ರಾಮ ಪಂಚಾಯಿತಿ ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ಸಾಧಿಸಲು ಉದ್ದೇಶಿಸಿರುವ ಅಭಿವೃದ್ಧಿಯ ಗುರಿ. ಇದೊಂದು ಪ್ರಮುಖವಾದ ದಾಖಲೆಯಾಗಿರುವುದರಿಂದ ನಿಖರತೆಗೆ ಹೆಚ್ಚು ಒತ್ತು ಕೊಡುವ ಅವಶ್ಯಕತೆಯಿದೆ.ಒಟ್ಟಾರೆಯಾಗಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಮೂರೂ ವಲಯಗಳಿಗೆ ಸಂಬಂಧಿಸಿದಂತೆ ಇರುವ ವಾಸ್ತವ ಸ್ಥಿತಿ, ಅಭಿವೃದ್ಧಿಗೆ ಸಂಬಂಧಿಸಿದಂತೆ ಜನರ ಬೇಡಿಕೆಗಳು, ವಾರ್ಡ್‌ಸಭೆಯಲ್ಲಿ ಗುರುತಿಸಲಾದ ಆಧ್ಯತೆಗಳು ಹಾಗೂ ಅಧಿಕಾರಿಗಳೊಂದಿಗೆ ನಡೆಸಲಾದ ಸಭೆಯ ಮೂಲಕ ಅಳವಡಿಸಿಕೊಳ್ಳಬಹುದಾದ ಕರಡು ಕ್ರಿಯಾ ಯೋಜನೆಯನ್ನು ಒಳಗೊಂಡಂತೆ ಅಭಿವೃದ್ಧಿ ಮುನ್ನೋಟ ವರದಿಯನ್ನು ದಾಖಲಿಸಬೇಕು. ಈ ವರದಿಯನ್ನು ಮುಂದೆ ನಡೆಯುವ ಗ್ರಾಮಸಭೆಯಲ್ಲಿ ಮಂಡಿಸಿ ಅಗತ್ಯ ತಿದ್ದುಪಡಿಗಳೊಂದಿಗೆ ಗ್ರಾಮಸಭೆಯಿಂದ ಅನುಮೋಧನೆಗೊಂಡನಂತರವೇ ಆ ವರದಿ ಅಧಿಕೃತವಾಗುತ್ತದೆ. ಅಭಿವೃದ್ಧಿ ಮುನ್ನೋಟ ವರದಿಯ ಅಧ್ಯಾಯಗಳಲ್ಲಿ ಕ್ರಮವಾಗಿ ದಾಖಲಿಸಬೇಕಾದ ವಿವರಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ದಾಖಲಿಸಲಾಗಿದೆ.

# ಜನಯೋಜನೆ

**ಗ್ರಾಮ ಪಂಚಾಯಿತಿಯ ಪಂಚವಾರ್ಷಿಕ ಅಭಿವೃದ್ಧಿ ಮುನ್ನೋಟ**

**ಪ್ರಸ್ತಾವನೆ**

ಅಭಿವೃದ್ಧಿ ಮುನ್ನೋಟ ಅಥವಾ ಜನ ಯೋಜನೆಯ ಹಿನ್ನೆಲೆ, ಪರಿಕಲ್ಪನೆ ಮತ್ತು ಅನಿವಾರ್ಯತೆಯ ಕುರಿತು ವಿವರಣೆಯನ್ನು ಪ್ರಸ್ತಾವನೆಯಲ್ಲಿ ನೀಡಲಾಗುತ್ತಿದೆ. ಪ್ರಸ್ಥಾವನೆಯನ್ನು ಎರಡು ಅಥವಾ ಮೂರು ಪುಟಗಳಿಗೆ ಸೀಮಿತವಾಗಿದ್ದರೆ ಒಳ್ಳೆಯದು. ಒಟ್ಟಾರೆಯಾಗಿ ಅಬಿವೃದ್ಧಿ ಮುನ್ನೋಟ ವರದಿಯ ಆಶಯವನ್ನು ಪ್ರಸ್ಥಾವನೆಯಲ್ಲಿ ಬಿಂಬಿಸುವ ಅಗತ್ಯವಿದೆ.

**ಅಧ್ಯಾಯ -1**

ಅಧ್ಯಾಯ ಒಂದರಲ್ಲಿ ಒಟ್ಟು ನಾಲ್ಕು ಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ. ಮೊದಲ ಭಾಗದಲ್ಲಿ ಗ್ರಾಮ ಪಂಚಾಯಿತಿಯ ಆಡಳಿತಾತ್ಮಕ ಹಿನ್ನೆಲೆ, ಎರಡನೇ ಭಾಗದಲ್ಲಿ ಮಾನವ ಸಂಪನ್ಮೂಲದ ಕುರಿತ ಮಾಹಿತಿ, ಮೂರನೇ ಭಾಗದಲ್ಲಿ ಜೀವ, ಭೌತಿಕ ಸಂಪನ್ಮೂಲಗಳ ಕುರಿತ ಮಾಹಿತಿ, ನಾಲ್ಕನೇ ಭಾಗದಲ್ಲಿ ಗ್ರಾಮ ಪಂಚಾಯಿತಿ ಹೊಂದಿರುವ ಆರ್ಥಿಕ ಸಂಪನ್ಮೂಲಗಳು ಮತ್ತು ಈ ಸಂಪನ್ಮೂಲಗಳ ಬಳಕೆಯ ಕುರಿತ ವಿವರಗಳನ್ನು ದಾಖಲಿಸಬೇಕು.

**ಅಧ್ಯಾಯ -2**

ಅಧ್ಯಾಯ ಎರಡರಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ನಿರ್ದಿಷ್ಟ ಪಡಿಸಿದ ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿ ಮುನ್ನೋಟವನ್ನು ಸಿದ್ಧಪಡಿಸಲು ಸ್ಥಳೀಯವಾಗಿ ರಚಿಸಲಾಗುವ ಕಾರ್ಯತಂಡಗಳ ವಿವರ ಇರುತ್ತದೆ. ಕಾರ್ಯತಂಡಗಳನ್ನು ಯಾವ ದಿನಾಂಕದಂದು ಸೇರಿದ ಗ್ರಾಮ ಪಂಚಾಯಿತಿ ಸಾಮನ್ಯ ಸಭೆಯಲ್ಲಿ ರಚಿಸಲಾಯಿತು ಎನ್ನುವ ವಿವರದ ಜೊತೆಗೆ ನಾಲ್ಕು ಕಾರ್ಯತಂಡಗಳಲ್ಲಿ ಇರುವ ಸದಸ್ಯರ ಸಂಪೂರ್ಣ ವಿವರಗಳನ್ನು ದಾಖಲಿಸಲಾಗುತ್ತಿದೆ. ಎರಡನೇ ಭಾಗದಲ್ಲಿ ಕಾರ್ಯತಂಡಗಳು ಪ್ರತಿ ವಾರ್ಡ್‌ನಲ್ಲಿ ನಡೆಸಿದ ಗ್ರಾಮ ಸಮೀಕ್ಷೆ ಮತ್ತು ಗುಂಪು ಸಭೆಗಳ ಚರ್ಚೆಯ ಮೂಲಕ ಕಂಡು ಕೊಂಡಂತೆ ಉತ್ಪಾಧನಾ ವಲಯ,ಮೂಲಭೂತ ಸೌಕರ್ಯ ವಲಯ ಮತ್ತು ಸಾಮಾಜಿಕ ನ್ಯಾಯ ವಲಯಗಳ ಪ್ರಸಕ್ತ ವಾಸ್ತವ ಸ್ಥಿತಿಯನ್ನು ಸಂಕ್ಷಿಪ್ತವಾಗಿ ಬರೆಯಲಾಗುತ್ತಿದೆ. ಈ ಮಾಹಿತಿಯನ್ನು ವಾರ್ಡ್‌ವಾರು ದಾಖಲಿಸಲಾಗುತ್ತಿದ್ದು, ಮೂರನೇ ಭಾಗದಲ್ಲಿ ವಾಸ್ತವ ಸ್ಥಿತಿಯನ್ನು ಬೆಂಬಲಿಸುವ ಸಾಮಾನ್ಯ ಮಾಹಿತಿಯ ಅಂಕಿ ಸಂಖ್ಯೆಗಳ ಕೋಷ್ಟಕಗಳು ಇರುತ್ತವೆ.

**ಅಧ್ಯಾಯ -3**

ಅಧ್ಯಾಯ ಮೂರರಲ್ಲಿ ಯೋಜನೆ ಸಿದ್ಧಪಡಿಸಲು ಬೇಕಾಗುವ ಮೂಲ ಅಂಶಗಳು ಇರುತ್ತವೆ. ಅಂದರೆ, ಪ್ರತಿಯೊಂದು ವಾರ್ಡ್‌ನಲ್ಲಿ ಮೂರೂ ವಲಯಗಳಲ್ಲಿ ಗುರುತಿಸಲಾದ ಜನರ ಅವಶ್ಯಕತೆಗಳು ಮತ್ತು ಬೇಡಿಕೆಗಳನ್ನು ವಾರ್ಡ್ ಸಭೆಯಲ್ಲಿ ನಿರ್ಧರಿಸಲಾದ ಆಧ್ಯತೆಗಳಿಗೆ ಅನುಸಾರವಾಗಿ ವಿಂಗಡಿಸಿ ದಾಖಲಿಸಲಾಗುತ್ತಿದೆ. ಗ್ರಾಮ ಸಭೆಯ ಮುಂದೆ ಮಂಡಿಸಲು ಅಧ್ಯಾಯ

# ಜನಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಲ್ಲಿ ನಡೆಸಬೇಕಾದ ಅನುಸರಣೆ.

ಗ್ರಾಮ ಪಂಚಾಯಿತಿ ಎಂಬುದು ಗ್ರಾಮೀಣ ಜನರಿಗೆ ಹತ್ತಿರವಿರುವ ಸ್ಥಳೀಯ ಸರಕಾರ. ಈ ಸರಕಾರ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದು ನಿರೀಕ್ಷಿಸುವುದು ಸಹಜ. ಗ್ರಾಮ ಪಂಚಾಯಿತಿಗಳು ಜನರ ಸಹಭಾಗಿತ್ವದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸುವ ಮೂಲಕ ಅಭಿವೃದ್ಧಿಯನ್ನು ಸಾಧಿಸಬೇಕು ಎಂದು ಆಶಿಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಈ ವ್ಯವಸ್ಥೆ ನಮ್ಮ ನಿರೀಕ್ಷೆ ಮತ್ತು ಆಶಯಗಳನ್ನು ಸಾಕಾರಗೊಳಿಸುವಷ್ಟು ಸಮರ್ಥವಾಗಿದೆಯೇ ಎನ್ನುವ ಪ್ರಶ್ನೆ ನಮ್ಮೆಲ್ಲರ ಮುಂದಿದೆ. ಈ ಪ್ರಶ್ನೆಯನ್ನು ಪ್ರಶ್ನೆಯಾಗಿಯೇ ಉಳಿಸಿಕೊಳ್ಳದೆ, ಗ್ರಾಮ ಪಂಚಾಯಿತಿಗಳು ನಿಜವಾದ ಸ್ಥಳೀಯ ಸರಕಾರಗಳಂತೆ ಕಾರ್ಯಪ್ರವೃತ್ತವಾಗುವಂತೆ ಮಾಡುವಲ್ಲಿ ಸಬಲೀಕರಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ನಡೆಸಬಹುದಾದ ಅನುಸರಣಾ ಚಟುವಟಿಕೆಗಳನ್ನು ಇಲ್ಲಿ ಚರ್ಚಿಸಲಾಗಿದೆ.

1. ಗ್ರಾಮ ಪಂಚಾಯಿತಿ ಆಡಳಿತ ಸುಧಾರಣೆ
2. ಜನ ಪ್ರತಿನಿಧಿಗಳು ಮತ್ತು ಅಧಿಕಾರಿ ವರ್ಗದ ಮನೋಭಾವದಲ್ಲಿ ಸಕಾರಾತ್ಮಕ ಮನೋಭಾವ
3. ಸಮುದಾಯ ಮತ್ತು ಸಮುದಾಯ ಸಂಘಟನೆಗಳ ಕ್ರಿಯಾತ್ಮಕ ಭಾಗವಹಿಸುವಿಕೆ
4. ಇಲಾಖಾ ಕಾರ್ಯಕ್ರಮಗಳು ಮತ್ತು ಗ್ರಾಮ ಪಂಚಾಯಿತಿ ನಡುವೆ ಸಮನ್ವಯ
5. ಮೂಲಭೂತ ಸೇವೆಗಳ ಪೂರೈಕೆಯಲ್ಲಿ ಸುಧಾರಣೆ
6. ವಿವಿಧ ಹಂತಗಳ ಪಂಚಾಯಿತಿರಾಜ್ ಸಂಸ್ಥೆಗಳ ನಡುವೆ ಸಮನ್ವಯ
7. ಸಮುದಾಯ ಜಾಗರೂಕರಣ ಮತ್ತು ಸಂಘಟನೆ
8. ಸಾಮಾಜಿಕ ತಪಾಸಣೆ

### 1. ಗ್ರಾಮ ಪಂಚಾಯಿತಿ ಆಡಳಿತ ಸುಧಾರಣೆ

ಗ್ರಾಮ ಪಂಚಾಯಿತಿ ಆಡಳಿತ ಸುಧಾರಣೆಗೆ ಹಲವು ಆಯಾಮಗಳಿವೆ. ಈ ಆಯಾಮಗಳನ್ನು ಪ್ರತ್ಯೇಕವಾಗಿ ಅಭ್ಯಸಿಸಿ ಕ್ಷೇತ್ರವಾರು ಘಟಕಗಳ ಸುಧಾರಣೆಗೆ ಕ್ರಮಗಳನ್ನು ವಿನ್ಯಾಸಗೊಳಿಸುವ ಮತ್ತು ಪ್ರಯೋಗಿಸುವ ಅಗತ್ಯವಿದೆ. ಆಡಳಿತ ಸುಧಾರಣೆಯಲ್ಲಿ ಮೂಲಭೂತವಾಗಿ ಇರುವ ಘಟಕಗಳನ್ನು ಗುರುತಿಸುವುದು ಮೊದಲ ಕೆಲಸ. ಆನಂತರ ಆ ಪಂಚಾಯಿತಿಗೆ ಸಂಬಂಧಪಟ್ಟಂತೆ ಆ ಘಟಕದಲ್ಲಿ ಇರುವ ಗುಣಾತ್ಮಕ ಅಂಶಗಳು ಮತ್ತು ಕೊರತೆಗಳನ್ನು ಕಂಡುಕೊಳ್ಳಬೇಕು. ಉದಾಹರಣೆಗೆ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮತ್ತು ಸಿಬ್ಬಂದಿಗಳ ಕಾರ್ಯಕ್ಷಮತೆ. ಗ್ರಾಮ ಪಂಚಾಯಿತಿ ಆಡಳಿತಕ್ಕೆ ಸಂಬಂಧಿಸಿದಂತೆ ಸುಧಾರಣಾ ಕ್ರಮ ವಹಿಸಬೇಕಾದ ಘಟಕಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- ನಿಯಮಿತವಾಗಿ ಸಾಮಾನ್ಯ ಸಭೆಗಳು ನಡೆಯುವಂತೆ ಮಾಡುವುದು
- ಸ್ಥಾಯೀ ಸಮಿತಿಗಳ ರಚನೆ ಮತ್ತು ನಿಯಮಿತವಾಗಿ ಸಭೆ ಸೇರುವಂತೆ ಮಾಡುವುದು
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರಕಾರದ ಸುತ್ತೋಲೆಗಳ ಮೂಲಕ ರಚಿತವಾಗಿರುವ ಉಪಸಮಿತಿಗಳು ಕ್ರಿಯಾತ್ಮಕವಾಗಿ ಚಟುವಟಿಕೆಗಳನ್ನು ನಡೆಸುವಂತೆ ನೋಡಿಕೊಳ್ಳುವುದು ಮತ್ತು ಈ ಸಮಿತಿಗಳ ಚಟುವಟಿಕೆಗಳನ್ನು ಗ್ರಾಮ ಪಂಚಾಯಿತಿಯೊಂದಿಗೆ ಸಮನ್ವಯಗೊಳಿಸುವುದು.
- ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಿರಿಯ ಇಂಜಿನಿಯರ್, ಬಿಲ್ ಕಲೆಕ್ಟರ್, ವಾಟರ್‌ಮನ್ ಇತ್ಯಾದಿ ಸಿಬ್ಬಂದಿಗಳು ನಿಯಮಿತವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುವ ಮತ್ತು ಜನರಿಗೆ ಲಭ್ಯರಾಗುವಂತಹ ವಾತಾವರಣವನ್ನು ಸೃಷ್ಟಿಸುವುದು
- ವಾರ್ಡ್ ಹಾಗೂ ಗ್ರಾಮಸಭೆಗಳು, ಪಂಚಾಯಿತಿ ಜಮಾಬಂದಿ, ವಾರ್ಷಿಕ ಲೆಕ್ಕ ಪತ್ರ ತಪಾಸಣೆ ಚಟುವಟಿಕೆಗಳು ನಿಯಮಿತವಾಗಿ ನಡೆಯುವಂತೆ ನೋಡಿಕೊಳ್ಳುವುದು. ಈ ಸಭೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಭಾಗವಹಿಸುವಂತೆ ಮಾಡುವುದು. ಗ್ರಾಮಸಭೆಗಳ ನಿರ್ಣಯಗಳು ಜಾರಿಯಾಗುವಂತೆ ಎಚ್ಚರವಹಿಸುವುದು.
- ಸಾರ್ವಜನಿಕರಿಗೆ ಗ್ರಾಮ ಪಂಚಾಯಿತಿಯ ಎಲ್ಲಾ ಸೇವೆಗಳು ನ್ಯಾಯಯುತವಾಗಿ ಸಿಗುವಂತಹ ವಾತಾವರಣವನ್ನು ಮೂಡಿಸುವುದು. ಗ್ರಾಮ ಪಂಚಾಯಿತಿಗಳಿಂದ ಸಾರ್ವಜನಿಕರಿಗೆ ನೀಡಬೇಕಾದ ಸೇವೆಗಳಿಗೆ ಸಂಬಂಧಿಸಿದಂತೆ ಸನ್ನದನ್ನು ಪ್ರಕಟಿಸುವಂತೆ ನೋಡಿಕೊಳ್ಳುವುದು. ಪಾರದರ್ಶಕತೆಗೆ ಹೆಚ್ಚು ಒತ್ತು ನೀಡುವುದು.
- ಗ್ರಾಮ ಪಂಚಾಯಿತಿಯ ಅಸ್ತಿಗಳ ನಿರ್ವಹಣೆ, ಸಂಪನ್ಮೂಲದ ಕ್ರೋಢೀಕರಣ ಮತ್ತು ಸರಿಯಾದ ಬಳಕೆಯನ್ನು ಖಾತರಿಪಡಿಸುವುದು.

ನಿಯಮಿತವಾಗಿ ಸಭೆ ಸೇರಿ ತಮ್ಮ ತಮ್ಮ ಕಾರ್ಯವ್ಯಾಪ್ತಿಯ ಕ್ಷೇತ್ರದ ಸುಧಾರಣೆಗೆ ಕ್ರಮ ಕೈಗೊಳ್ಳುವಂತೆ ಮಾಡುವುದು.

- ಸಮುದಾಯ ಮತ್ತು ಸಮುದಾಯ ಸಂಘಟನೆಗಳ ನೆರವಿನಿಂದ ಗ್ರಾಮದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣವು ವಿಕಸಿತಗೊಳ್ಳಲು ಸಹಕಾರಿಯಾಗುವ ಕಾರ್ಯಕ್ರಮಗಳನ್ನು ರೂಪಿಸುವುದು. ಆರೋಗ್ಯ ತಪಾಸಣಾ ಶಿಬಿರಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಮಾಜಿಕ ಅನಿಷ್ಟಗಳ ವಿರುದ್ಧ ಜನಜಾಗೃತಿ ಕಾರ್ಯಕ್ರಮಗಳು, ಶಾಲಾ ಮಕ್ಕಳಿಗೆ ರಜಾ ದಿನದ ಶಿಬಿರಗಳು ಇತ್ಯಾದಿ ಕಾರ್ಯಕ್ರಮಗಳನ್ನು ಸಂಘಟಿಸುವಲ್ಲಿ ಹೆಚ್ಚಿನ ಒತ್ತು ನೀಡಬೇಕು.

**4. ಇಲಾಖಾ ಕಾರ್ಯಕ್ರಮಗಳು ಮತ್ತು ಗ್ರಾಮ ಪಂಚಾಯಿತಿ ನಡುವೆ ಸಮನ್ವಯ**

ಪ್ರಸಕ್ತ ಕರ್ನಾಟಕದಲ್ಲಿ 29 ಕಾರ್ಯಕ್ರಮಗಳನ್ನು ಪಂಚಾಯಿತಿರಾಜ್ ಸಂಸ್ಥೆಗಳ ಅಧೀನಕ್ಕೆ ವಹಿಸಲಾಗಿದ್ದರೂ, ಈ ತೀರ್ಮಾನ ಸಂಪೂರ್ಣವಾಗಿ ಅನುಷ್ಠಾನಗೊಳ್ಳದೆ ಇರುವುದರಿಂದ ಪಂಚಾಯಿತಿರಾಜ್ ಸಂಸ್ಥೆಗಳು ಮತ್ತು ಅಭಿವೃದ್ಧಿ ಇಲಾಖೆಗಳ ನಡುವೆ ಸಮನ್ವಯದ ಕೊರತೆಯನ್ನು ಕಾಣಲಾಗುತ್ತಿದೆ.ಗ್ರಾಮ ಸಭೆಗಳಲ್ಲಿ ತೆಗೆದುಕೊಳ್ಳಲಾದ ತೀರ್ಮಾನಗಳಿಗೆ ಬಹುತೇಕ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನ ಅಥವಾ ಸೌಲಭ್ಯಗಳ ಹಂಚಿಕೆ ಸಂದರ್ಭದಲ್ಲಿ ಮನ್ನಣೆ ಸಿಗುತ್ತಿಲ್ಲ ಎನ್ನುವ ಅಸಮಧಾನ ವ್ಯಾಪಕವಾಗಿ ಕೇಳಿಬರುತ್ತಿದೆ. ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ತಳಹಂತದ ಸರಕಾರವಾಗಿರುವ ಗ್ರಾಮ ಪಂಚಾಯಿತಿ ಮತ್ತು ಗ್ರಾಮಸಭೆಗೆ ಇಲಾಖೆಗಳು ಮತ್ತು ಇಲಾಖಾ ಸಿಬ್ಬಂದಿಗಳು ಗೌರವ ಮತ್ತು ಮನ್ನಣೆ ಕೊಡುವುದು ತೀರಾ ಅವಶ್ಯವಾಗಿದ್ದು, ಈ ನಿಟ್ಟಿನಲ್ಲಿ ಈ ಕೆಳಗಿನ ಕ್ರಮಗಳು ಕಾರ್ಯಗತವಾಗುವಂತೆ ನೋಡಿಕೊಳ್ಳಬೇಕು.

- ವಿವಿಧ ಇಲಾಖಾ ಕಾರ್ಯಕ್ರಮಗಳು ಮತ್ತು ಸರಕಾರದ ಸೌಲಭ್ಯ ಹಂಚಿಕೆಯ ಕುರಿತಂತೆ ಗ್ರಾಮ ಪಂಚಾಯಿತಿಗಳಿಗೆ ಮುಂಚಿತವಾಗಿ ಮಾಹಿತಿ ನೀಡುವುದಲ್ಲದೆ, ಗ್ರಾಮಸಭೆಯ ನಿರ್ಣಯಗಳಿಗನುಸಾರವಾಗಿ ಸೌಲಭ್ಯಗಳ ಹಂಚಿಕೆ ಮಾಡಬೇಕು ಎನ್ನುವ ಸರಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನೋಡಿಕೊಳ್ಳುವುದು.
- ವಿವಿಧ ಇಲಾಖಾ ಕಾರ್ಯಕ್ರಮಗಳು ಗ್ರಾಮ ಪಂಚಾಯಿತಿಯ ಅಬಿವೃದ್ಧಿ ಮುನ್ನೋಟವನ್ನು ಆಧರಿಸಿಯೇ ಅನುಷ್ಠಾನವಾಗುವಂತೆ ಮಾಡುವುದು.
- ವಿವಿಧ ಇಲಾಖಾ ಕ್ಷೇತ್ರ ಸಿಬ್ಬಂದಿಗಳನ್ನು ಪ್ರತಿ ತಿಂಗಳು ನಡೆಸುವ ಸಾಮಾನ್ಯ ಸಭೆ, ಕನಿಷ್ಟ ಮೂರು ತಿಂಗಳಿಗೊಮ್ಮೆ ನಡೆಯಬೇಕಾದ ಕಾರ್ಯತಂಡಗಳ ಸಭೆ, ಆರು ತಿಂಗಳಿಗೊಮ್ಮೆ ನಡೆಯುವ ವಾರ್ಡ್ ಮತ್ತು ಗ್ರಾಮಸಭೆಗೆ ಆಹ್ವಾನಿಸಿ, ಅವರು ಕಡ್ಡಾಯವಾಗಿ ಈ ಸಭೆಗಳಲ್ಲಿ ಭಾಗವಹಿಸಿ ಇಲಾಖಾ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡುವಂತೆ ಮಾಡುವುದು.
- ವಿವಿಧ ಇಲಾಖೆಗಳು ತಮ್ಮ ಇಲಾಖೆಗಳ ಮೂಲಕ ಜನರಿಗೆ ಒದಗಿಸಬಹುದಾದ ಸೌಲಭ್ಯಗಳ ಕುರಿತು ಕರಪತ್ರಗಳನ್ನು ಹಂಚುವುದಲ್ಲದೆ, ಶಿಬಿರಗಳನ್ನು ಏರ್ಪಡಿಸಿ ಸಾರ್ವಜನಿಕರಿಗೆ ಮಾಹಿತಿ ನೀಡುವಂತಹ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುವುದು.
- ಇಲಾಖಾ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಸೌಲಭ್ಯಗಳು ಸಿಗುವಂತಹ ವಾತಾವರಣವನ್ನು ಸೃಷ್ಟಿಸುವುದು.
- ಗ್ರಾಮ ಪಂಚಾಯಿತಿಗೆ ನೇಮಿಸಲ್ಪಟ್ಟ ನೋಡಲ್ ಅಧಿಕಾರಿ ಪಂಚಾಯಿತಿಯೊಂದಿಗೆ ನಿಕಟ ಸಂಪರ್ಕ ಇಟ್ಟುಕೊಳ್ಳಬೇಕು. ಇಲಾಖೆಗಳು ಮತ್ತು ಗ್ರಾಮ ಪಂಚಾಯಿತಿಯ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಮತ್ತು ಇಲಾಖಾ ಕಾರ್ಯಕ್ರಮಗಳ ಅನುಷ್ಠಾನದ ಸಂದರ್ಭದಲ್ಲಿ ಎದುರಾಗುವ ತೊಡಕುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ನೋಡಲ್ ಅಧಿಕಾರಿ ಕಾರ್ಯನಿರ್ವಹಿಸಬೇಕು.

**5. ಮೂಲಭೂತ ಸೇವೆಗಳ ಪೂರೈಕೆಯಲ್ಲಿ ಸುಧಾರಣೆ**

ಕರ್ನಾಟಕದಲ್ಲಿ, ಅದರಲ್ಲೂ ಮುಖ್ಯವಾಗಿ ನಂಜುಂಡಪ್ಪ ಸಮಿತಿ ಗುರುತಿಸಿರುವ 39 ಅತ್ಯಂತ ಹಿಂದುಳಿದ ತಾಲೂಕುಗಳಲ್ಲಿ ಹಿಂದುಳಿಯುವಿಕೆಯ ಪ್ರಮುಖ ಕಾರಣಗಳಲ್ಲಿ ಮೂಲಭೂತ ಸೇವೆಗಳ ಪೂರೈಕೆಯಲ್ಲಿ ಇರುವ ಕೊರತೆಯೂ ಒಂದು ಎಂಬುದು ವಾಸ್ತವ. ಹಿಂದುಳಿಯುವಿಕೆಯನ್ನು ತೊಡೆದು ಹಾಕಿ ಅಭಿವೃದ್ಧಿಯ ದಾರಿಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಮೂಲಭೂತ ಸೇವೆಗಳ ಪೂರೈಕೆಯಲ್ಲಿ ಸುಧಾರಣೆ ತರುವುದು ಅವಶ್ಯವಾಗಿದೆ. ಮುಖ್ಯವಾಗಿ ಪೂರ್ವ ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಕುಡಿಯುವ ನೀರು ಮತ್ತು ನೈರ್ಮಲ್ಯ, ರಸ್ತೆ, ಬೀದಿ ದೀಪ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ

## 6. ವಿವಿಧ ಹಂತಗಳ ಪಂಚಾಯಿತಿರಾಜ್ ಸಂಸ್ಥೆಗಳ ನಡುವೆ ಸಮನ್ವಯ

ಮೂರು ಹಂತದ ಪಂಚಾಯಿತಿ ರಾಜ್ ಸಂಸ್ಥೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಆಧಾರ ಸ್ಥಂಭಗಳಾಗಿವೆ. ಈ ವ್ಯವಸ್ಥೆಗಳು ಪರಸ್ಪರ ಸಮನ್ವಯ ಮತ್ತು ಸಹಕಾರದಿಂದ ಕೆಲಸ ನಿರ್ವಹಿಸಿದಲ್ಲಿ ಎಲ್ಲಾ ಅಭಿವೃದ್ಧಿ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡು ಅಭಿವೃದ್ಧಿಯ ದಾರಿಯಲ್ಲಿ ಹೆಜ್ಜೆ ಇಡಲು ಸಾಧ್ಯ. ಆದರೆ ಪ್ರಸಕ್ತ ಪಂಚಾಯಿತಿರಾಜ್ ಸಂಸ್ಥೆಗಳು ಸಮನ್ವಯದಿಂದ ಕೆಲಸ ನಿರ್ವಹಿಸುವಲ್ಲಿ ಸೋತು ಹೋಗಿವೆ. ಈ ಲೋಪವನ್ನು ಸರಿಪಡಿಸುವಲ್ಲಿ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

- ವಾರ್ಡ್ ಮತ್ತು ಗ್ರಾಮ ಸಭೆಗಳಿಗೆ ಮೇಲಿನ ಹಂತಗಳ ಚುನಾಯಿತ ಪ್ರತಿನಿಧಿಗಳನ್ನೂ ಆಹ್ವಾನಿಸಿ ಗ್ರಾಮದ ಅಭಿವೃದ್ಧಿಯ ಬೇಡಿಕೆಗಳನ್ನು ಅವರ ಗಮನಕ್ಕೆ ತರುವುದು.
- ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಮುನ್ನೋಟ ಸಿದ್ಧಪಡಿಸುವ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲಿ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಆಹ್ವಾನಿಸಿ, ಅವರ ಹಂತಗಳಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನೂ ಅಭಿವೃದ್ಧಿ ಮುನ್ನೋಟದಲ್ಲಿ ಸೇರಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿಯಿಂದ ಏರ್ಪಡಿಸಲಾಗುವ ಯಾವುದೇ ಸಭೆ, ಸಮಾರಂಭ, ಜಾಗೃತಿ ಅಭಿಯಾನಗಳಿಗೆ ಮೇಲಿನ ಹಂತದ ಚುನಾಯಿತ ಪ್ರತಿನಿಧಿಗಳನ್ನು ಹಾಗೂ ಅಧಿಕಾರಿಗಳನ್ನು ಆಹ್ವಾನಿಸಿ ಅವರು ಗ್ರಾಮದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿಕೊಡಬೇಕು.
- ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಾಗಲೀ, ಶಾಸಕರ ಮತ್ತು ಸಂಸದರ ಪ್ರದೇಶಾಭಿವೃದ್ಧಿ ನಿಧಿಯಿಂದಾಗಲೀ, ನರೆ,ಬರ ಪರಿಹಾರದ ಕಾಮಗಾರಿಗಳಾಗಲೀ ಗ್ರಾಮ ಪಂಚಾಯಿತಿಯ ಬೌಗೋಳಿಕ ವ್ಯಾಪ್ತಿಯಲ್ಲೇ ನಡೆಯುವುದರಿಂದ ಮೇಲಿನ ಎಲ್ಲಾ ಚಟುವಟಿಕೆಗಳನ್ನು ಗ್ರಾಮಪಂಚಾಯಿತಿಯ ಗಮನಕ್ಕೆ ತಂದು ಅನುಷ್ಠಾನಗೊಲಿಸುವಂತೆ ನೋಡಿಕೊಳ್ಳುವುದು.
- ಮೇಲಿನ ಹಂತಗಳಿಂದ ಆಗಬೇಕಾಗಿರುವ ಯಾವುದೇ ಅಭಿವೃದ್ಧಿ ಕಾರ್ಯಗಳಾಗಲೀ, ಸೌಲಭ್ಯಗಳನ್ನಾಗಲೀ ಪಡೆಯುವ ನಿಟ್ಟಿನಲ್ಲಿ ಮೇಲಿನ ಹಂತದ ಚುನಾಯಿತ ಪ್ರತಿನಿಧಿಗಳೊಂದಿಗೆ ಸಂಘರ್ಷಕ್ಕೆ ಇಳಿಯುವ ಬದಲು ಸಾಧ್ಯವಾದಷ್ಟು ಮಟ್ಟಿಗೆ ಪರಸ್ಪರ ಮಾತುಕತೆ, ಚರ್ಚೆ ಹಾಗೂ ಸಮುದಾಯದಿಂದ ಸಂಘಟಿತ ಒತ್ತಡ ಹಾಕುವ ಮೂಲಕ ಆಗಬೇಕಾದ ಕೆಲಸವನ್ನು ಸಾಧಿಸುವ ಪ್ರಯತ್ನವನ್ನು ಮಾಡಬೇಕು.

## 7. ಸಮುದಾಯ ಜಾಗರೂಕರಣ

ಆಡಳಿತಗಾರರು ದಾರಿತಪ್ಪದಂತೆ ನೋಡಿಕೊಳ್ಳುವ ಮಹತ್ತರ ಹೊಣೆಗಾರಿಕೆ ಪ್ರಜೆಗಳ ಮೇಲಿದೆ. ಈ ಕಾರಣಕ್ಕಾಗಿಯೇ ಪ್ರಜಾಪ್ರಭುತ್ವ ವ್ಯವಸ್ಥೆಗೆ ತುಂಬಾ ಮಹತ್ವವಿದೆ. ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಅಸ್ತಿತ್ವಕ್ಕೆ ಬಂದ ಮೂರು ಸ್ಥರಗಳ ಪಂಚಾಯಿತಿ ವ್ಯವಸ್ಥೆ ಜನರಿಗೆ ನೇರವಾಗಿ ಆಡಳಿತದಲ್ಲಿ ಪಾಲುಗೊಳ್ಳಲು ಇರುವ ವಿಶಿಷ್ಟ ವ್ಯವಸ್ಥೆಯಾಗಿದೆ. ಆದರೆ ಜನಸಮುದಾಯ ಪಂಚಾಯಿತಿರಾಜ್ ವ್ಯವಸ್ಥೆಯಲ್ಲಿ ತಮ್ಮ ಪಾತ್ರದ ಕುರಿತು ಅರ್ಥೈಸಿಕೊಳ್ಳುವಲ್ಲಿ ವಿಫಲವಾಗಿರುವ ಕಾರಣದಿಂದಲೇ ಈ ವ್ಯವಸ್ಥೆ ಲಗಾಮು ಇಲ್ಲದ ಕುದುರೆಯಂತೆ ಅಡ್ಡಾದಿಡ್ಡಿ ಹೋಗುತ್ತಿದೆ. ಜನಸಮುದಾಯದಲ್ಲಿ ಜಾಗೃತಿ ಮೂಡಿಸಿ ಅವರು ಕೂಡ ಆಡಳಿತ ವ್ಯವಸ್ಥೆಯಲ್ಲಿ ಪರಿಣಾಮಕಾಯಾಗಿ ಭಾಗವಹಿಸುವಂತೆ ಮಾಡುವುದರಿಂದ ಪ್ರಜಾಪ್ರಭುತ್ವದ ನಿಜವಾದ ಆಶಯ ಈಡೇರುವ ಜೊತೆಗೆ, ಗ್ರಾಮೀಣ ಪ್ರದೇಶಗಳಲ್ಲೂ ಅಭಿವೃದ್ಧಿಯ ಗಾಳಿ ಬೀಸುವಂತೆ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಮಾಡಬಹುದಾದ ಪ್ರಯತ್ನಗಳನ್ನು ಹೀಗೆ ಗುರುತಿಸಬಹುದು.

- ಆಡಳಿತದಲ್ಲಿ ಸಮುದಾಯವು ಪಾಲ್ಗೊಳ್ಳಲು ಅವಕಾಶ ಕಲ್ಪಿಸಿರುವ ವಾರ್ಡ್ ಮತ್ತು ಗ್ರಾಮಸಭೆಗಳಲ್ಲಿ ಜನರು ಭಾಗವಹಿಸುವಂತಹ ವಾತಾವರಣವನ್ನು ಕಲ್ಪಿಸುವುದು. ವಾರ್ಡ್ ಮತ್ತು ಗ್ರಾಮ ಸಭೆಗಳ ಕುರಿತು ಜನರಿಗೆ ನಂಬಿಕೆ ಬರುವಂತೆ ಮಾಡುವುದು.
- ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ರಚಿಸಬೇಕಾಗಿರುವ ಎಲ್ಲಾ ಉಪಸಮಿತಿಗಳನ್ನು ರಚಿಸುವುದಲ್ಲದೆ, ಈ ಸಮಿತಿಗಳು ಕಾಲ ಕಾಲಕ್ಕೆ ಸಭೆ ಸೇರಿ ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸುವಂತೆ ಪ್ರೇರೇಪಿಸುವುದು.
- ಗ್ರಾಮ ಪಂಚಾಯಿತಿ ಜಮಾಬಂದಿಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗ್ರಾಮ ಪಂಚಾಯಿತಿಯು ಕೈಗೊಂಡ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆದಿವೆಯೇ ಎಂದು ಪರಿಶೀಲಿಸುವ ಅಗತ್ಯವನ್ನು ಮನಗಾಣಿಸುವುದು.
- ಗ್ರಾಮ ಪಂಚಾಯಿತಿ ಅಥವಾ ಮೇಲಿನ ಹಂತದ ಪಂಚಾಯಿತಿರಾಜ್ ಸಂಸ್ಥೆಗಳು ಗ್ರಾಮದ ಅಭಿವೃದ್ಧಿಗೆ ವ್ಯತಿರಿಕ್ತವಾದ ತೀರ್ಮಾನಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸಲು ಪ್ರಯತ್ನಿಸಿದ ಸಂದರ್ಭಗಳಲ್ಲಿ ಪ್ರಶ್ನಿಸುವ, ಪ್ರತಿಭಟಿಸುವ, ವಾರ್ಡ್ ಹಾಗೂ ಗ್ರಾಮಸಭೆಗಳಲ್ಲಿ ಚರ್ಚಿಸುವಂತೆ ಸಮುದಾಯವನ್ನು ಪ್ರೇರೇಪಿಸುವುದು. ಇಂತಹ ಕಾರ್ಯವನ್ನು ಸಂಘಟಿತವಾಗಿ ಮಾಡುವ ಸಲುವಾಗಿ ಸ್ವ ಸಹಾಯ ಸಂಘಗಳ